


## ಸರ್ವವ್ಯಾಪಿಯಾಗಲಿ...

ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣುಮಕ್ಕಳಿಗೆ ಹಲವು ವಿಚಾರಗಳಲ್ಲಿ ನಿರ್ಬಂಧಗಳಿವೆ. ಅವುಗಳಲ್ಲಿ ತಮ್ಮ ತಂದೆ ತಾಯಿಗಳ ಅಂತ್ಯಕ್ರಿಯೆಯನ್ನು ಹೆಣ್ಣುಮಕ್ಕಳು ಮಾಡುವುದು ಸಂಪ್ರದಾಯ ವಿರೋಧಿ ಎಂಬ ಧೋರಣೆಯೂ ಒಂದು. ಬರಿಯ ಹೆಣ್ಣುಮಕ್ಕಳಿಗೆ ಜನ್ಮಕೊಟ್ಟ ತಂದೆ ತಾಯಿಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಬೇರೆಯವರು 'ಅವರಿಗೆ ತಲೆ ಬೋಳಿಸಿಕೊಳ್ಳಲೂ ಒಬ್ಬ ಮಗನಿಲ್ಲ' ಎಂದು ಮೂದಲಿಸುವುದನ್ನು ನೋಡಿದ್ದೇವೆ.

ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳೇ ಆತ್ಮೀಯತೆಯಿಂದ ತಮ್ಮ ತಂದೆ ತಾಯಿಗಳನ್ನು ನೋಡಿಕೊಳ್ಳುತ್ತಾರೆ. ಹಾಗಿದ್ದಾಗ ಅಂತ್ಯಕ್ರಿಯೆಯನ್ನು ಅವರು ಮಾಡಬಾರದು ಎಂಬ ಅಭಿಪ್ರಾಯ ಖಂಡಿತ ತಪ್ಪು. ಆ ಹಕ್ಕು ಅವರಿಗೆ ಇದ್ದೇ ಇದೆ. ಈ ಕಾರ್ಯವನ್ನು ಧೈರ್ಯದಿಂದ ಅನುಷ್ಠಾನಕ್ಕೆ ತರಲು ಕಾನೂನಿನ ರಕ್ಷಣೆಯನ್ನೂ ಹೆಣ್ಣುಮಕ್ಕಳಿಗೆ ಕೊಡಬೇಕಾಗಿದೆ. ಈಗ ಹಳ್ಳಿಗಳಲ್ಲೂ ಹೆಣ್ಣುಮಕ್ಕಳು ತಮ್ಮ ಹೆತ್ತವರ ಅಂತ್ಯಸಂಸ್ಕಾರ ನಡೆಸುವ ಪ್ರಕರಣಗಳು ಅಲ್ಲಲ್ಲಿ ವರದಿಯಾಗುತ್ತಿವೆ. ಇದು ಸರ್ವವ್ಯಾಪಿಯಾಗಲಿ!

—ಚಾವಲ್ಮನೆ ಸುರೇಶ್ ನಾಯಕ್, ಚಿಕ್ಕಮಗಳೂರು

## ಹೆಣ್ಣುಮಕ್ಕಳೇ ಗಂಡುಮಕ್ಕಳಾದಾಗ!

ಸುಮಾರು ಆರು ವರ್ಷಗಳ ಹಿಂದೆ ಮುಂಬೈನ ಕಲ್ಯಾಣ್‌ನಲ್ಲಿ ನಮ್ಮ ನೆರೆಯ ಫ್ಲ್ಯಾಟ್‌ನಲ್ಲಿ ಮೂಲ ಮಂಗಳೂರಿನ ಕುಟುಂಬವೊಂದು ವಾಸಿಸುತ್ತಿತ್ತು. ಆ ಕುಟುಂಬದಲ್ಲಿ ಅಪ್ಪ, ಅಮ್ಮ ಮತ್ತು ಇಬ್ಬರು ಹೆಣ್ಣುಮಕ್ಕಳಿದ್ದರು. ಹೆತ್ತವರು ದಿನಸಿ ಅಂಗಡಿಯ ವ್ಯಾಪಾರ ಹೊಂದಿದ್ದರೆ, ಹೆಣ್ಣುಮಕ್ಕಳಿಬ್ಬರೂ ಪದವಿ ಓದಿ ಖಾಸಗಿ ಸಂಸ್ಥೆಗಳಲ್ಲಿ ಆಗಷ್ಟೇ ಉದ್ಯೋಗಕ್ಕೆ ಸೇರಿಕೊಂಡಿದ್ದರು.

ಅಚಾನಕ್ಕಾಗಿ ಸುಮಾರು 65ರ ವಯಸ್ಸಿನ ಅಪ್ಪ ಆಸ್ಪತ್ರೆ ಸೇರಿ 3 ದಿನಗಳಲ್ಲಿ ತೀರಿಕೊಂಡರು. ಶವಸಂಸ್ಕಾರಕ್ಕೆ ನೆರೆಹೊರೆಯ ಸಮುದಾಯದ ಹಿರಿಯರು ಮತ್ತು ಸ್ಥಳೀಯ ಸಂಘಟನೆಯ ಸದಸ್ಯರೆಲ್ಲರೂ ಸೇರಿ ಸುಮಾರು ನೂರು ಮಂದಿ ಜಮಾಯಿಸಿದ್ದರು. ಮೃತರಿಗೆ ಗಂಡುಮಕ್ಕಳಿಲ್ಲದಿದ್ದುದರಿಂದ ಸಂಪ್ರದಾಯ ಪ್ರಕಾರ ಎಲ್ಲರೂ ಒಗ್ಗೂಡಿ ಮೃತರ ತಮ್ಮನ ಮಗನಿಂದ ಚಿತೆಗೆ ಬೆಂಕಿಯಿಟ್ಟು ಅಂತ್ಯಸಂಸ್ಕಾರ ಮಾಡಿಸಲು ನಿರ್ಧರಿಸಿದರು. ವಿಧಿವಿಧಾನಗಳೆಲ್ಲವನ್ನೂ ಮನೆಯಲ್ಲಿ ಪೂರೈಸಿ ಸ್ಮಶಾನಕ್ಕೆ ಹೊರಟಾಗ ಹಿರಿಯರ ಮಾತಿಗೆ ಕಿವಿಗೊಡದೆ ಹೆಣ್ಣುಮಕ್ಕಳಿಬ್ಬರೂ ಜೊತೆಗೇ ಬಂದರು.

ಅಲ್ಲಿ ಚಿತೆಗೆ ಅಗ್ನಿಸ್ಪರ್ಶ ಮಾಡಲು ಅಣ್ಣ ಮುಂದಾದಾಗ ಆತನನ್ನು ಹಿಂದಕ್ಕೆ ಸರಿಸಿ ಹೆಣ್ಣುಮಕ್ಕಳಿಬ್ಬರೂ ಸೇರಿ, 'ನಮ್ಮಪ್ಪನಿಗೆ ಹೆಣ್ಣುಮಕ್ಕಳೂ ನಾವೇ ಗಂಡುಮಕ್ಕಳೂ ನಾವೇ...' ಎಂಬ ದೃಢ ಮಾತುಗಳನ್ನಾಡಿದರು. ಸಮುದಾಯದ ಹಿರಿತಲೆಗಳು, 'ಎಲಾ ಹುಡುಗಿಯರೇ' ಎಂದು ಮೂಗಿಗೆ ಬೆರಳಿಟ್ಟುಕೊಳ್ಳುತ್ತಿದ್ದಂತೆಯೇ, ಅಪ್ಪನ ಚಿತೆಗೆ ಬೆಂಕಿಯಿಟ್ಟೇ ಬಿಟ್ಟರು! ಆ ಹುಡುಗಿಯರ ದಿಟ್ಟತನಕ್ಕೆ ಹಿರಿಯರು ವಿರೋಧಿಸಿದರೂ ನಾನು ಮನದೊಳಗೇ ಮೆಚ್ಚಿಕೊಂಡೆ.

ಈಗ ಅವರಿಬ್ಬರೂ ಮದುವೆಯಾಗದೆ ಉಳಿದು ತಾಯಿಯನ್ನು ನೋಡಿಕೊಳ್ಳುವ ನಿರ್ಧಾರ ಕೂಡ ಮಾಡಿದ್ದಾರೆ!

—ರಮಣ್ ಶೆಟ್ಟಿ ರೆಂಜಾಳ, ಮುಂಬೈ

## ಹೆತ್ತವರನ್ನು ಮರೆಯಲಾದೀತೆ?

ಈಗ ಹೆಣ್ಣಿಗೆ 'ಸಮಾನತೆಯ ಹಕ್ಕು' ಕಾನೂನಿನಲ್ಲಿಯೇ ಇರುವಾಗ ಅಂತ್ಯಸಂಸ್ಕಾರದ ವಿಷಯಕ್ಕೂ ಅನ್ವಯಿಸುತ್ತದೆ. ಕೆಲವು ಮೂಢ ಸಂಪ್ರದಾಯಗಳು ಕಾಲಕ್ಕೆ ತಕ್ಕಂತೆ ಬದಲಾಗಿರುವ ಈ ಸಂದರ್ಭದಲ್ಲಿ ಹೆಣ್ಣುಮಕ್ಕಳನ್ನು ಕ್ರಿಯಾಕರ್ಮಗಳಿಂದ ದೂರವಿರಿಸುವುದರಲ್ಲಿ ಅರ್ಥವಿಲ್ಲ. ಸತಿ ಸಹಗಮನ ಪದ್ಧತಿ, ವಿಧವಾ ವಿವಾಹ ಮುಂತಾದ ಮೂಢ ಆಚರಣೆಗಳು ಬದಲಾಗಲಿಲ್ಲವೇ? ಹಾಗೇ ಇದು ಕೂಡ.

ಜನ್ಮ ಕೊಟ್ಟು ಬೆಳೆಸಿ, ಆಡಿಸಿ, ಓದಿಸಿ ಪ್ರೀತಿಯಿಂದ ತಪ್ಪು ಒಪ್ಪುಗಳನ್ನು ತಿದ್ದಿ ತೀಡಿ, ಬದುಕು ರೂಪಿಸಿಕೊಟ್ಟ ಹೆತ್ತವರನ್ನು ಹೆಣ್ಣುಮಕ್ಕಳು ಮರೆಯಲಾದೀತೆ?

ನನ್ನ ಗೆಳತಿಯ ಒಬ್ಬಳೇ ಮಗಳು ಎಂಜಿನಿಯರಿಂಗ್ ಓದಿ ಕೆಲಸದಲ್ಲಿದ್ದಳು. ಗೆಳತಿಯ ಗಂಡ ಮೂರು ವರ್ಷಗಳಿಂದ ಮಾರಣಾಂತಿಕ ಕಾಯಿಲೆ ಅನುಭವಿಸಿ ಈಚೆಗೆ ಕೊನೆಯುಸಿರೆಳೆದರು. ಆಸ್ತಿ ಕಲಹದಿಂದ ಆತನ ಅಣ್ಣ ತಮ್ಮಂದಿರು ದೂರವಾಗಿದ್ದರು. ಮನೆಯ ಉಸ್ತುವಾರಿ, ಆಸ್ಪತ್ರೆಯ ಓಡಾಟವನ್ನು ಅಮ್ಮ ಮಗಳೇ ಸೇರಿ ನಿಭಾಯಿಸಿದ್ದರು.

ಅಂತ್ಯಸಂಸ್ಕಾರ ಸಮಯದಲ್ಲಿ ಆ ಹೆಣ್ಣುಮಗಳು ತನ್ನ ತಂದೆಯ ಸಂಸ್ಕಾರವನ್ನು ಸಂಪೂರ್ಣವಾಗಿ ತಾನೇ ಮಾಡುತ್ತೇನೆ ಎಂದು ದಿಟ್ಟತನದಿಂದ ಹೇಳಿದಾಗ ಮೂದಲಿಕೆಯ ಮಾತುಗಳು ಕೇಳಿಬಂದವು. 'ಇಷ್ಟು ದಿನ ಒಮ್ಮೆಯೂ ನಮ್ಮ ಬಗ್ಗೆ ವಿಚಾರಿಸದೆ, ಮಾತನಾಡದೆ ಇದ್ದವರು, ಕಷ್ಟ ಸುಖಕ್ಕೆ ಬಾರದವರ ಬಾಯಲ್ಲಿ ನೂರೆಂಟು ಮಾತುಗಳು ಬರುತ್ತಿವೆ' ಎಂದು ಕಟುನುಡಿಯಲ್ಲಿ ಉತ್ತರ ಕೊಟ್ಟು ಶಾಸ್ತ್ರಗಳನ್ನು ಮುಂದುವರಿಸಿದಳು. ಸಂಪ್ರದಾಯ ಯಾವುದೇ ಇರಲಿ, ನಮ್ಮ ನಂಬಿಕೆ, ಪ್ರೀತಿ, ಪ್ರಾಮಾಣಿಕತೆಗೆ ಬದ್ಧವಾಗಿರಬೇಕು ಎಂದೇ ನಾನು ನಂಬಿದ್ದೇನೆ.

—ಶುಭಾ ದಿವಾಕರ್, ಬೆಂಗಳೂರು

ಸಮಾಜದಲ್ಲಿ 'ಹೆಣ್ಣು' ಎಂಬ ಕಾರಣಕ್ಕೆ ಎದುರಾಗುವ ತರತಮಗಳು ಹಲವು. ಹೆತ್ತವರ ಅಂತ್ಯಸಂಸ್ಕಾರದ ವಿಷಯದಲ್ಲಿಯೂ ಈ ಪಕ್ಷಪಾತ ಮುಂದುವರೆಯುತ್ತದೆ. 'ಹೆಣ್ಣುಮಕ್ಕಳು ಹೆತ್ತವರ ಅಂತ್ಯಸಂಸ್ಕಾರ ಮಾಡಬಹುದೇ?' –ಈ ಪ್ರಶ್ನೆ ಸಮಾಜದಲ್ಲಿ ಆಗಾಗ ಚರ್ಚೆಗೆ ಈಡಾಗುತ್ತಲೇ ಇರುತ್ತದೆ. ತಮ್ಮ ತಂದೆ ತಾಯಿಯ ಜವಾಬ್ದಾರಿಯನ್ನು ಪ್ರೀತಿಯಿಂದಲೇ ಹೊತ್ತು ನಿಭಾಯಿಸಿದ್ದ ಹೆಣ್ಣುಮಕ್ಕಳಿಗೆ ಅವರ ಕ್ರಿಯಾಕರ್ಮಗಳನ್ನು ಮಾಡುವ ಹಕ್ಕು ಇಲ್ಲವೇ? ಈ ಬಗ್ಗೆ ನಿಮ್ಮ ಅನಿಸಿಕೆ, ಅನುಭವಗಳಿದ್ದರೆ ಹಂಚಿಕೊಳ್ಳಬಹುದು. ಬರಹ 150 ಪದಮಿತಿಯಲ್ಲಿರಲಿ. ಕೊನೆಯ ದಿನ ಆಗಸ್ಟ್ 17. ನುಡಿ ಅಥವಾ ಯುನಿಕೋಡ್‌ನಲ್ಲಿ ನಿಮ್ಮ ಲೇಖನವಿರಲಿ. editorsu@sudha.co.inಗೆ ಬರೆದು ಕಳುಹಿಸಿ.